Improvements to existing Water Supply Scheme to Chamarajnagar.

285 SRI M. C. BASAPPA (Chamarajanagar).—Will the Minister for Housing and Urban Development be pleased to state: –

(a) whether improvements to the existing water supply is sanctioned to Chamarajanagar town;

(b) estimated cost and the improvements proposed;

(c) the period by which work is expected to be completed;

(d) stage at which works are pending?

SRI DHARAMSINGH NARAYANSINGH (Minister for Housing and Urban Development).—

(a) Yes.

(b) The estimated cost is Rs. 58.00 lakhs. The improvements proposed under the estimate are as per details of statement laid on the table.

(c) The work is expected to be completed by end of 1981-82.

(d) The progress achieved on the scheme up to end of November 1980 is Rs. 8,27,707/-. The work of test infiltration well is under progress. Draft tender schedules have been approved and tenders are invited for construction of 2 Nos. of R. C. C. overhead Tank of 5.00 lakhs litres capacity. Arrangements are being made to take up the other works also.

ಶ್ರೀ ಎಂ.ಸಿ. ಬಸಪ್ಪ.—ಈ ಯೋಜನೆಗೆ ಖರ್ಚಾಗತಕ್ಕ ಹಣ ೫೮ ಲಕ್ಷ ರೂಪಾಯಿಗಳು ಎಂದು ತಿಳಿಸಿದ್ದೀರಿ. ಇದರಲ್ಲಿ ಮೂರನೇ ಎರಡು ಅಂಶದ ಮೊತ್ತವನ್ನು ಜೀವವಿಮಾ ಇಲಾಖೆ ಕೊಡುತ್ತದೆ, ಉಳಿಕೆ ಹಣವನ್ನು ಸರ್ಕಾರ ಕೊಡಬೇಕಾಗಿದೆ. ಸರ್ಕಾರದ ವತಿಯಿಂದ ಕೊಡಬೇಕಾದ ಮೊತ್ತವನ್ನು ಇನ್ನು ಕೂಡ ಕರ್ನಾಟಕ ಅರ್ಬನ್ ವಾಟರ್ ಸಪ್ಲೈನವರಿಗೆ ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಈಗಾಗಲೇ ಜೀವವಿಮಾ ಇಲಾಖೆಯವರು ೧೭ ಲಕ್ಷ ರೂಪಾಯಿ ಗಳನ್ನು ಕೊಟ್ಟಿದ್ದಾರೆ, ಸರ್ಕಾರದವರು ೧.೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಟ್ಟು ೧೮.೧ ಲಕ್ಷ ರೂಪಾಯಿಗಳನ್ನು ಈಗಾಗಲೇ ಅರ್ಬನ್ ವಾಟರ್ ಸಪ್ಲೈ ಬೋರ್ಡಿಗೆ ಕೊಟ್ಟಿದೆ, ಇದರಲ್ಲಿ ೧೦ ಲಕ್ಷ ರೂಪಾಯಿ ಖರ್ಚಾಗಿದೆ. ಮುಂದಿನ ಹಣವನ್ನು ಕೊಡಲಾಗುವುದು.

ಶ್ರೀ ಎಂ.ಸಿ. ಬಸಪ್ಪ.—ಸರ್ಕಾರದವರು ಕೊಡತಕ್ಕ ಹಣವನ್ನು ಕಾಲಕ್ಕೆ ಸರಿಯಾಗಿ ಕೊಟ್ಟರೆ ಕೆಲಸ ನಡೆಯುತ್ತೆ. ಹಣದ ಕೊರತೆ ಬರದ ಹಾಗೆ ನೋಡಿಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೀರಾ?

ಶ್ರೀ ಧರ್ಮಸಿಂಗ್.—ಯಾವುದೇ ಯೋಜನೆಯನ್ನಾಗಲೀ ನಿಗದಿಯಾದ ಸಮಯದಲ್ಲಿಯೇ ಮುಗಿಸ ಬೇಕೆಂಬುದು ಸರ್ಕಾರದ ಧೋರಣೆ. ಈ ವಿಚಾರದಲ್ಲಿ ಅರ್ಥ ಮಂತ್ರಿಗಳ ಜೊತೆ ಈಗಾಗಲೇ ಮಾತನಾಡಿ ದ್ದೇನೆ. ಸಾಕಷ್ಟು ಹಣ ಕೊಡಲಿಕ್ಕೆ ಅವರು ಆಶ್ವಾಸನೆ ಕೊಟ್ಟಿದ್ದಾರೆ. ೧೯೮೨ರಲ್ಲಿ ಈ ಯೋಜನೆ ಯನ್ನು ಮುಗಿಸಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಎಂ.ಸಿ. ಬಸಪ್ಪ.—ಸ್ವಾಮಿ, ಅಭಿವೃದ್ಧಿ ಯೋಜನೆಯನ್ನು ಏನು ಕೈಗೊಂಡಿದ್ದೀರಿ, ಅವು ಗಳನ್ನು ನಿಮ್ಮ ಇಲಾಖೆಯಿಂದ ಸರಿಯಾದ ರೀತಿಯಲ್ಲಿ ಮೇನ್‌ಟೇನ್ ಮಾಡದೇ ಇದ್ದರೆ, ನಾಳೆ ನೀರು

ಸರಬರಾಜು ಮಾಡುವುದಕ್ಕೆ ಯೋಗ್ಯವಾಗಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದರ ಉಸ್ತುವಾರಿಯನ್ನು ಕರ್ನಾಟಕ ನಗರ ೨ೀರು ಸರಬರಾಜು ಮಂಡಲಿಗೆ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್. –ಈಗಾಗಲೇ ಸರ್ಕಾರದ ಆಜ್ಞೆ ಆಗಿದೆ. ಮುನಿಸಿಪಾಲಿಟಿಯವರು ದುಡು ಕಟ್ಟಬೇಕಾಗಿತ್ತು, ಕಟ್ಟಿಲ್ಲ. ಅವರು ದುಡ್ಡು ಕೊಡದೇ ಇದ್ದರೂ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಇದೆ.

ಶ್ರೀ ಎಂ. ಸಿ. ಬಸಪ್ಪ.––ಕಳೆದ ಅಧಿವೇಶನದಲ್ಲಿಯೂ ತಾವು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದೀರಿ, ಇದುವರೆಗೆ ಆಗಿಲ್ಲ. ಏಪ್ರಿಲ್ ೧ನೇ ತಾರೀಖಿನೊಳಗೆ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.––ಹೋದ ಸದನದಲ್ಲಿ ಆಶ್ವಾಸನೆ ಕೊಟ್ಟಿತ್ತು, ಮುನಿಸಿಪಾಲಿಟಿಯವರು ದುಡ್ಡು ಕಟ್ಟಬೇಕಾಗಿತ್ತು ಕಟ್ಟಿಲ್ಲಿಲ್ಲ. ೧.೫೬ ಸಾವಿರ ರೂಪಾಯಿ ಕಟ್ಟಿದ್ದಾರೆ. ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಾಗುವುದು.

Issue of Ration Cards in Davangere

303 SRI PAMPAPATHI (Davanagere).—Will the Minister for Food and Civil Supplies be pleased to state:—

(a) whether it has come to the notice of the Government that the ration cards are not properly distributed in Davangere city;

(b) whether all the cards have been renewed;

(c) if not renewed, the reasons for the same?

SRI MANIK RAO SHAMA RAO PATIL (Minister for Food and Civil Supplies).—

(a) No.

(b) All the ration cards are in active operation. Therefore the question of renewal of ration cards does not arise.

(c) A new devise of taking census for distributing the new ration cards in Davangere city has just been completed and writing of new ration cards is in progress.

ಶ್ರೀ ಪಂಪಾಪತಿ.––ಸ್ವಾಮಿ, ನನ್ನ (ೇ) ಪ್ರಶ್ನೆಗೆ ಉತ್ತರವಾಗಿ, ದಾವಣಗೆರೆ ಸಿಟಿಯಲ್ಲಿ ಹೊಸ ಪಡಿತರ ಚೀಟಿಗಳನ್ನು ಹಂಚುವ ಬಾಬು ಹೊಸದಾಗಿ ಕೈಗೊಂಡ ಪಡಿತರ ಗಣತಿಯು ಪೂರೈಸಿರುತ್ತೆ ಮತ್ತು ಹೊಸ ಪಡಿತರ ಚೀಟಿಗಳನ್ನು ಬರೆಯುವ ಕೆಲಸವು ಸಹ ಪ್ರಗತಿಯಲ್ಲಿರುತ್ತೆ ಎಂದು ತಿಳಿಸಿದ್ದೀರಿ. ಎಷ್ಟು ದಿವಸದಲ್ಲಿ ಹಂಚುತ್ತೀರಾ ?

SRI MANIK RAO PATIL.—We have already taken necessary steps to distribute the new ration cards and it will be completed early.

ಶ್ರೀ ಪಂಪಾಪತಿ.––ಎಷ್ಟು ದಿವಸದಲ್ಲಿ ಹಂಚುತ್ತೀರೆಂದು ಹೇಳಿ, ಪಡಿತರ ಚೀಟಿ ಇಲ್ಲದೇ ಇದ್ದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ ದಾವಣಗೆರೆ ನಗರ ದೊಡ್ಡ ನಗರ. ಅನೇಕ ಜನರಿಗೆ ಕಾರ್ಡ್ ಗಳು ಇಲ್ಲ. ಒಂದು ತಿಂಗಳಲ್ಲಿ ಕೊಡುತ್ತೇವೆಂದು ಒಂದು ಟೈಮ್ ಹೇಳಿ.

ಶ್ರೀ ಮಾಣಿಕರಾವ್ ಪಾಟೀಲ್.––ಹಳೇ ಕಾರ್ಡುಗಳು ಚಾಲನೆಯಲ್ಲಿವೆ. ಯಾವ ರೀತಿಯು ತೊಂದರೆಯೂ ಬರುತ್ತಿಲ್ಲ. So far as new cards are concerned, necessary